ದಿನಾಂಕ: 03-08-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀಸವಾಲು: ಶ್ರೀ ಆಶಿಕ್ ಅಹ್ಮದ್ ವಕೀಲರಿಂದ :-**

5. ನಾನು ಬಿತ್ತುವಾಗ ಪ್ರತಿವಾದಿಗಳು ಬಂದು ತೊಂದರೆ ಮಾಡಿದರು ಹೊಲದಲ್ಲಿ ಅಡ್ಡ ಮಲಗಿಕೊಂಡರು ಆದರೆ ದಿನಾಂಕ ನೆನಪಿಲ್ಲ ಅದಕ್ಕಾಗಿ ಕೇಸ್ ಹಾಕಿರುತ್ತೇನೆ. 5 ಮಂದಿ ಮೇಲೆ ಕೇಸ್ ಮಾಡಿರುತ್ತೇನೆ. 1 ನೇ ಪ್ರತಿವಾದಿ ಕೆಂಚಪ್ಪ, 2 ಮತ್ತು 3 ನೇ ಪ್ರತಿವಾದಿಗಳು ಅವರ ಮಗ ಮತ್ತು ಸೊಸೆ, 5 ನೇ ಪ್ರತಿವಾದಿ 1 ನೇ ಪ್ರತಿವಾದಿ ತಮ್ಮ 4 ನೇ ಪ್ರತಿವಾದಿ 5 ನೇ ಪ್ರತಿವಾದಿಯ ಮಗ. ಪ್ರತಿವಾದಿಗಳು ನಾನು ಬಿತ್ತುವಾಗ ತೊಂದರೆ ಮಾಡಿದ್ದಾರೆ. ನಾನು ಜಮೀನು ಖರೀದಿ ಮಾಡಿದ ನಂತರ ತೊಂದರೆ ಮಾಡಿದ್ದಾರೆ. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ, ಅದರಲ್ಲಿರುವ ವ್ಯಕ್ತಿಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದರಲ್ಲಿರುವ ಹೊಲವನ್ನು ಗುರುತಿಸಲಾಗುವುದಿಲ್ಲ. ಪೋಟೋದಲ್ಲಿರುವ ಹೊಲ ನನ್ನದಲ್ಲ, ಸದರಿ ಹೊಲವನ್ನು ನಾನು ಖರೀದಿ ಮಾಡಿಲ್ಲ, ನಾನು ಸರಸ್ವತಮ್ಮನ ಹೊಲವನ್ನು ಖರೀದಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಪೋಟೊದಲ್ಲಿರುವ ಹೊಲವನ್ನು ಪ್ರತಿವಾದಿಗಳು ಬಿತ್ತಿ ಬೆಳಯಲು ನಮ್ಮದು ತಕರಾರು ಇಲ್ಲ ಎಂದರೆ ಅವರದು ಹೊಲ ಇಲ್ಲ ಎಂದು ನುಡಿಯುತ್ತಾರೆ. ಪೋಟೋದಲ್ಲಿರುವ ಹೊಲದಲ್ಲಿ ಪ್ರತಿವಾದಿಗಳು ಬಿತ್ತಿ ಬೆಳೆಯುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ಅಕ್ಕಪಕ್ಕದಲ್ಲಿ ಪ್ರತಿವಾದಿಯರ ಹೊಲ ಇಲ್ಲ. ಸಾಕ್ಷಿಗೆ ಪಹಣಿ ತೋರಿಸಲಾಗಿ ಸರ್ವೆ ನಂಬರ್ 22 ಹಿಸ್ಸಾ-2, ವಿಸ್ತೀರ್ಣ 05 ಎಕರೆ 37 ಗುಂಟೆ, ಮಿಂಚೇರಿ ಗ್ರಾಮದ ಪಹಣಿ ತೋರಿಸಲಾಗಿ, ಅದು ನಾನು ಖರೀದಿಸಿದ ಹೊಲದ ಮೊದಲಿನ ಪಹಣಿ ಎಂದು ನುಡಿಯುತ್ತಾರೆ. ಸದರಿ ಪಹಣಿ ಬಸಲಿಂಗಪ್ಪನ ಹೆಸರಿಗೆ ಇದೆ. ಸರಸ್ವತಮ್ಮನ ಗಂಡ ಬಸಲಿಂಗಪ್ಪ. ಸದರಿ ಪಹಣಿಯ ಸಾಗುವಳಿಯ ಕಾಲಂನಲ್ಲಿ ಕೆಂಚಪ್ಪ ತಂದೆ ಹನುಮಪ್ಪ ಎಂದು ನಮೂದು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ ಡಿ 1 ಎಂದು ಗುರುತಿಸಲಾಯಿತು. ಸರಸ್ವತಮ್ಮನವರು ಪೋತಿ ವಿರಸಾಸತ್ ಖಾತೆ ಮಾಡಿಸಲು ಬಸಲಿಂಗಪ್ಪನ ಮರಣ ಉತಾರ ಹಚ್ಚಿ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಮಾಹಿತಿಲ್ಲ ಎಂದು ನುಡಿಯುತ್ತಾರೆ. ನಾನು ಖರೀದಿಸಿದ ಜಮೀನು ಮುಟೇಶನ್ ಆಗುವಾಗ ನೋಟಿಸ್ ಕೊಟ್ಟಿದ್ದರು ಎಂದರೆ ನನಗೆ ಮಾಹಿತಿ ಇಲ್ಲ.

6. ನಾನು ಖರೀದಿಸಿದ ನಂತರ ಸಾಲ ಪಡೆದಿರುತ್ತೇನೆ. ಖರೀದಿ ಪತ್ರ ಆದ 1 ವರ್ಷದ ಬಳಿಕ ನಾನು ಸಾಲ ತೆಗೆದುಕೊಂಡಿರುತ್ತೇನೆ. ಪ್ರತಿವಾದಿಗಳು ನನಗೆ ತೊಂದರೆ ಕೊಟ್ಟಿದ್ದಕ್ಕಾಗಿ ವಿಡಿಯೋವನ್ನಾಗಲೀ ನಾನು ಪೋಟೊವನ್ನಾಗಲೀ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮೇಲೆ ತೋರಿಸಿದ ಪೋಟೋಗಳಲ್ಲಿ ಪ್ರತಿವಾದಿಗಳು ದಾವಾದ ಆಸ್ತಿಯಲ್ಲಿ ಸ್ವಾಧೀನ ಹೊಂದಿದ ಪೋಟೋಗಳಾಗಿದ್ದು ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ. ನಾನು ಪೋಲಿಸರ ಬಳಿ ಸ್ವಾಧೀನ ಕೊಡಿಸಿರಿ ಅಂತಾ ಹೋಗಿದ್ದೇನು ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಆದೇಶವನ್ನು ತೆಗೆದುಕೊಂಡು ಪೋಲೀಸ್ ಠಾಣೆಗೆ ಹೋಗಿದ್ದೇನೆ. ನಾನು ಖರೀದಿ ಮಾಡಿದಾಗಿನಿಂದ ಕಬ್ಜಾದಲ್ಲಿದ್ದೇನೆ. ನಾನು ಸರಸ್ವತೆಮ್ಮ ಅವರ ಜೊತೆ ಸೇರಿಕೊಂಡು ಖೊಟ್ಟಿ ಖರೀದಿ ಪತ್ರವನ್ನು ಮಾಡಿದ್ದೇನೆಂದರೆ ಸರಿಯಲ್ಲ ನಾನು ಸುಳ್ಳು ಖರೀದಿ ಕರಾರು ಪತ್ರ ಮಾಡಿಸಿದ್ದೇನೆಂದರೆ ಸರಿಯಲ್ಲ ಕ್ರಿಮಿನಲ್ ಕೇಸ್ ಆದ ಮೇಲೆ ನಾನು ಆಸ್ತಿಯನ್ನು ಸ್ವಾಧೀನಕ್ಕೆ ಪಡೆದುಕೊಂಡಿದ್ದೇನೆಂದರೆ ಸರಿಯಲ್ಲ. ಸಿ ಸಿ ನಂಬರ್ 132/2023 ಇದೇ ನ್ಯಾಯಾಲಯದಲ್ಲಿ ದಾಖಲಾಗಿದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ಹೊಲಕ್ಕೆ ಹೋಗಿಲ್ಲ, ಖರೀದಿ ಮಾಡಿಲ್ಲ ನಾನು ಮತ್ತು ಸರಸ್ವತೆಮ್ಮ ಸೇರಿ ಕೇಸ್ ಮಾಡಿದ್ದೇವೆಂದರೆ ಸರಿಯಲ್ಲ. ಪ್ರತಿವಾದಿಗಳು ತಕರಾರು ಮಾಡಿದ ಮೇಲೆ ನಾನು ಸರಸ್ವತೆಮ್ಮನವರಿಗೆ ಹೇಳಿದ್ದೇನೆ. ನಾನು ಸರಸ್ವತೆಮ್ಮನವರನ್ನು ಈ ಕೇಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಪ್ರತಿವಾದಿಗಳಿಗೆ ಈ ಕೇಸ್ ಹಾಕುವವರೆಗೆ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಕೋರ್ಟ್ ನಿಂದ ಆದೇಶ ಬಂದ ನಂತರ ದಬ್ಬಾಳಿಕೆಯಿಂದ ನಾನು ಸ್ವಾಧೀನದಲ್ಲಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸರಿ ಇದೆ.
**ಸಹಿ/-**
**( ಚಂದ್ರಶೇಖರ ಪಿ. ದಿಡ್ಡಿ )**
ಹಿರಿಯ ಸಿವಿಲ್ ನ್ಯಾಯಾಧೀಶರು,
**ಲಿಂಗಸೂಗುರು.**